ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಗ್ರಾಮದಲ್ಲಿ ಅಕ್ರಮವಾಗಿ ನಿವೇಶನಗಳನ್ನು ಮಾಡಿ ಮಾರಾಟ ಮಾಡುತ್ತಿರುವುದು.

903(1335) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಗ್ರಾಮದ ಸರ್ವೆ ನಂ. 39 :7ರಲ್ಲಿ ಇರುವ ಹಿಡುವಳಿ ಜಮೀನಿನಲ್ಲಿ ಅಕ್ರಮವಾಗಿ ನಿವೇಶನಗಳನ್ನು ಮಾಡಿ ಮಾರಾಟ ಮಾಡಿ ಕರ್ನಾಟಕ ಭೂ ಕಂದಾಯ ಕಾಯ್ದೆ ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಕ್ರಮವಾಗಿ ಮಾಡಿರುವ ನಿವೇಶನಗಳನ್ನು ಖರೀದಿಸಿದವರಿಗೆ ಹಣವನ್ನು ವಾಪಸ್ಸು ಮಾಡಿ ಈ ಜಮೀನನ್ನು ಹಿಡುವಳಿ ಜಮೀನಾಗಿ ಉಪಯೋಗಿಸಲು ಜಮೀನು ಮಾಲೀಕರಿಗೆ ಸರ್ಕಾರವು ಆದೇಶಿಸುತ್ತದೆಯೇ?

ಇ) ಈ ರೀತಿ ಅಕ್ರಮ ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುವುದಕ್ಕೆ ಕಾನೂನು ಪ್ರಕಾರ ಸರ್ಕಾರ ಕ್ರಮ ಜರುಗಿಸುತ್ತದೆಯೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು, ಅನಧಿಕೃತ ಲೇಔಟ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದ ತಕ್ಷಣ ತಡೆಹಿಡಿದು, ನಿವೇಶನ ಮಾಡದಂತೆ ಲಿಖಿತ ಹೇಳಿಕೆ ಪಡೆದಿರುತ್ತದೆ. ನಿವೇಶನಗಳನ್ನು ಮಾರಾಟ ಮಾಡಿರುವುದು ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ರೀತಿ ಅಕ್ರಮ ನಿವೇಶನಗಳನ್ನು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಜಯನಗರದ ಬಿಟಿಬಿ ಪ್ರದೇಶದ ಗೃಹ ಮಂಡಳಿ ಮನೆಗಳಲ್ಲಿ ಅನಧಿಕೃತವಾಗಿ ಸೇರಿಕೊಂಡಿರುವುದು.

904(1334) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :—ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಜಯನಗರದ ಬಿ.ಟಿಬಿ. ಪ್ರದೇಶದಲ್ಲಿ ಕರ್ನಾಟಕ ಗೃಹಮಂಡಳಿಯ ಸುಮಾರು 140 ಮನೆಗಳನ್ನು ನಿರ್ಮಿಸಿರುವುದು ನಿಜವೇ;

ಅ) ಹಾಗಿದ್ದಲ್ಲಿ, ಈ ಮನೆಗಳನ್ನು ಯಾವಾಗ ನಿರ್ಮಿಸಲಾಯಿತು;

ಇ) ಇಲ್ಲಿಯವರೆಗೆ ಈ ಮನೆಗಳನ್ನು ಹಂಚಿಕೆ ಮಾಡದೇ ಇರಲು ಕಾರಣಗಳೇನು;

ಈ) ಈ ಮನೆಗಳಲ್ಲಿ ಸುಮಾರು 80 ಜನರು ಅನಧಿಕೃತವಾಗಿ ಸೇರಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇವರನ್ನು ಖಾಲಿ ಮಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಊ) ಈ ಮನೆಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಜಯನಗರ ಬಿ.ಟಿ.ಬಿ. ಪ್ರದೇಶದಲ್ಲಿ ಕರ್ನಾಟಕ ಗೃಹ ಮಂಡಳಿಯು 120 ಮನೆಗಳನ್ನು ಮಾತ್ರ ನಿರ್ಮಿಸಿದೆ.

ಆ) ಈ ಮನೆಗಳನ್ನು ಡಿಸೆಂಬರ್ 96ರಲ್ಲಿ ಪೂರ್ಣಗೊಳಿಸಲಾಯಿತು.

ಇ) ಈ ಮನೆಗಳಿಗೆ ನೀರಿನ ಸಂಪರ್ಕ ಒಳಚರಂಡಿ ವ್ಯವಸ್ಥೆಯ ಮತ್ತು ವಿದ್ಯುತ್ ಸಂಪರ್ಕಗಳನ್ನು ಒದಗಿಸುವ ಕಾಮಗಾರಿ ಬಾಕಿ ಉಳಿದಿರುತ್ತದೆ. ಈ ಕಾರಣದಿಂದ ಮನೆಗಳ ಹಂಚಿಕೆ ಮಾಡಿರುವುದಿಲ್ಲ.

ಈ) ಈ ಮನೆಗಳಲ್ಲಿ ಅನಧಿಕೃತವಾಗಿ ಯಾರೂ ಪ್ರವೇಶ ಮಾಡಿರುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ನಾಗರೀಕ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ ಪೂರ್ಣಗೊಂಡ ನಂತರ ಈ ಮನೆಗಳ ಹಂಚಿಕೆಯನ್ನು ವಸತಿ ಸಮಿತಿಯು ಆಯ್ಕೆ ಮಾಡುವಂತಹ ಫಲಾನುಭವಿಗಳಿಗೆ ಹಂಚಿಕೆಮಾಡಲಾಗುವುದು.